# ಸಿನಿಮಾ ಹಾದಿಯಲ್ಲಿ ಅಪೂರ್ವ ಹೊಸ ತಿರುವು

**ಹೀರೊಯಿನ್ ಎನಿಸಿಕೊಳ್ಳುವುದಕ್ಕಿಂತ 'ಉತ್ತಮ ಕಲಾವಿದೆ'ಯಾಗಿ ಗುರುತಿಸಿಕೊಳ್ಳಬೇಕೆಂಬುದು ಅಪೂರ್ವ ಭಾರದ್ವಾಜ್ ಅಪೇಕ್ಷೆ. ಅವರ ನಟನೆಯ 'ಬ್ಯಾಡ್', 'ನೋಡಿದವರು ಏನಂತಾರೆ', 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು' ಸಿನಿಮಾಗಳು ಬಿಡುಗಡೆಯ ಸಿದ್ಧತೆಯಲ್ಲಿವೆ.**

**■ ಸುಮಲತಾ ಎನ್.**

'ನನ್ನ ಸ್ವಭಾವಕ್ಕೆ ವಿರುದ್ಧವಾದ ಯಾವುದೇ ಪಾತ್ರ ಕೊಟ್ಟರೂ ಅದನ್ನು ಬಹಳ ಪ್ರೀತಿಯಿಂದ ಮಾಡುತ್ತೇನೆ' ಎನ್ನುವ ನಟಿ ಅಪೂರ್ವ ಭಾರದ್ವಾಜ್, ಕಿರುತೆರೆಯಿಂದ ಬೆಳ್ಳಿತೆರೆಗೆ ಕಾಲಿಟ್ಟು ಐದಾರು ವರ್ಷಗಳಾಗಿವೆ. ಈ ಅವಧಿಯಲ್ಲಿ ಸಿನಿಮಾ ಕುರಿತ ತಮ್ಮ ಆಲೋಚನೆಗಳೂ ಬದಲಾಗಿವೆ ಎನ್ನುವ ಅವರಿಗೆ, ಹೀರೊಯಿನ್ ಎಂದು ಕರೆಸಿಕೊಳ್ಳುವುದಕ್ಕಿಂತ ಉತ್ತಮ ಕಲಾವಿದೆಯಾಗಿ ಹೆಸರು ಮಾಡಬೇಕೆಂಬ ಆಸೆ.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಅಪೂರ್ವ ಭಾರದ್ವಾಜ್, ನಟನೆಯನ್ನು ಬಯಸಿ ಬಂದವರಲ್ಲ. ರಿಯಾಲಿಟಿ ಶೋ ಒಂದರ ತಾಂತ್ರಿಕ ತಂಡದಲ್ಲಿ ಕೆಲಸ ಮಾಡುತ್ತಿದ್ದಾಗ ಬಂದ ಕಿರುತೆರೆ ಅವಕಾಶ ಅವರ ಬದುಕಿನ ದಿಕ್ಕನ್ನೇ ಬದಲಿಸಿತು. 'ಅನುರೂಪ' ಧಾರಾವಾಹಿಗೆ ಮೊದಲ ಬಾರಿಗೆ ಬಣ್ಣ ಹಚ್ಚಿದ ನಂತರ ಆರು ಧಾರಾವಾಹಿಗಳಲ್ಲಿ ನಟಿಸಿದ ಅವರಿಗೆ ಸಿನಿಮಾ ಪ್ರಪಂಚವೂ ತೆರೆದುಕೊಂಡಿತ್ತು. 'ಮಿರ್ಚಿ ಮಂಡಕ್ಕಿ ಕಡಕ್ ಚಾಯ್', 'ಉಪ್ಪಿನ ಕಾಗದ', 'ಕ್ರಿಟಿಕಲ್ ಕೀರ್ತನೆಗಳು', 'ನೋಡಿ ಸ್ವಾಮಿ ಇವನು ಇರೋದೆ ಹೀಗೆ', 'ಹನಿಮೂನ್', 'ನಾನು ಅದು ಮತ್ತು ಸರೋಜ', ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದರು.

ಇದೀಗ 'ಬ್ಯಾಡ್' ಸಿನಿಮಾದಲ್ಲಿ ತಮ್ಮನ್ನು ಭಿನ್ನ ಧಾಟಿಯಲ್ಲಿ ಬಿಂಬಿಸಿಕೊಂಡಿದ್ದು, ಇದು ತಮಗೆ ಸವಾಲೆನಿಸಿದ ಪಾತ್ರ ಎಂದಿದ್ದಾರೆ.

''ಭಾವನೆಗಳು 'ಬ್ಯಾಡ್' ಸಿನಿಮಾದ ತಿರುಳು. ಇದರಲ್ಲಿ ಪ್ರತಿ ಪಾತ್ರವೂ ಒಂದೊಂದು ಭಾವನೆಯನ್ನು ಪ್ರತಿನಿಧಿಸುತ್ತದೆ. ನನ್ನ ಪಾತ್ರ ಪ್ರೀತಿಯನ್ನು ಪ್ರತಿನಿಧಿಸುತ್ತದೆ. ನನ್ನದು ತುಂಬಾ ಇಂಟೆನ್ಸ್ ಪಾತ್ರ. ಸಿನಿಮಾದ ದಿಕ್ಕನ್ನೇ ಬದಲಿಸುವಂಥದ್ದು. ಹಿಂದೆಂದೂ ನಾನು ಪ್ರಯೋಗಿಸಿರದ ಪಾತ್ರವಿದು'' ಎಂದು ಉತ್ಸುಕರಾಗಿ ಮಾತನಾಡುತ್ತಾರೆ.



ಇಂಥದ್ದೇ ಧಾಟಿಯ ಮತ್ತಷ್ಟು ಪಾತ್ರಗಳಿಗೂ ಬಣ್ಣ ಹಚ್ಚಬೇಕೆಂಬುದು ಅವರ ಆಸೆ. 'ಬೇರೆ ಬೇರೆ ವ್ಯಕ್ತಿತ್ವ, ಆಯಾಮದ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ಆಸೆಯಿದೆ. ಒಂದರಿಂದ ಮತ್ತೊಂದು ಸಿನಿಮಾಗೆ ಯಾವುದೇ ಹೋಲಿಕೆಯಿರದಂಥ ಪಾತ್ರವಿರಬೇಕು. ನಾನು ನನ್ನ ನಿಜ ಜೀವನದಲ್ಲಿರುವುದಕ್ಕಿಂತ ವಿರುದ್ಧವಾದ, ವಿಭಿನ್ನವಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ತುಂಬಾ ಇಷ್ಟ' ಎಂದು ವಿವರಿಸುತ್ತಾರೆ.

ತಮ್ಮನ್ನು ತಾವು ಹೀರೊಯಿನ್ ಎಂದು ಕರೆದುಕೊಳ್ಳುವುದಕ್ಕಿಂತ ಉತ್ತಮ ಕಲಾವಿದೆಯಾಗಿ ಗುರುತಿಸಿಕೊಳ್ಳಲು ಬಯಸುತ್ತಾರಂತೆ ಅಪೂರ್ವ. 'ನಾನು ಮೊದಲಿನಿಂದಲೂ ಸ್ಟಾರ್ ನಟಿ, ಹೀರೊಯಿನ್ ಆಗಬೇಕೆಂದು ಬಯಸಲಿಲ್ಲ. ಆ ದಾರಿ ನನ್ನದಾಗಿರಲಿಲ್ಲ. ಆದರೆ ಉತ್ತಮ ಕಲಾವಿದೆ ಆಗಬೇಕೆಂದು ಬಯಸಿದ್ದೆ. ಈ ವಿಷಯದಲ್ಲಿ ನಟಿ ರಾಧಿಕಾ ಆಪ್ಟೆ ನನಗೆ ಮಾದರಿ. ಅವರು ಎಷ್ಟೋ ಸಿನಿಮಾಗಳಲ್ಲಿ ಸಣ್ಣ ಪಾತ್ರಗಳಲ್ಲೂ ಕಾಣಿಸಿಕೊಂಡಿದ್ದಾರೆ. ಸಣ್ಣ ಪಾತ್ರವಾದರೂ ಮನಸ್ಸಿನಲ್ಲುಳಿಯುವಂಥ ಪಾತ್ರಗಳನ್ನು ನಿರ್ವಹಿಸಿದ್ದಾರೆ. ನನಗೂ ಆ ರೀತಿಯ ಪಾತ್ರಗಳನ್ನು ಎಕ್ಸ್‌ಪ್ಲೋರ್ ಮಾಡುವಾಸೆ' ಎನ್ನುತ್ತಾರೆ.

ಸಿನಿಮಾ ಹಾದಿಯಲ್ಲಿ ನಡೆಯಲು ತಮ್ಮಲ್ಲಿನ ಆತ್ಮವಿಶ್ವಾಸಕ್ಕೆ ಕಿರುತೆರೆಯ ಅನುಭವವೂ ಅಡಿಪಾಯವಾಯಿತು ಎಂದು ಸ್ಮರಿಸಿಕೊಳ್ಳುತ್ತಾರೆ ಅಪೂರ್ವ.

'ಹೊಸ ಕಲಾವಿದರಿಗೆ ಧಾರಾವಾಹಿ ನಟನಾಶಾಲೆ. ಕ್ಯಾಮೆರಾ ಎದುರಿಸಲು, ಡೈಲಾಗ್, ಭಾಷೆ ಕಲಿಯಲು ನೆರವಾಗುತ್ತದೆ. ಆದರೆ ಧಾರಾವಾಹಿಗಳು ವರ್ಷಗಟ್ಟಲೆ ನಡೆಯುವುದರಿಂದ ಪಾತ್ರ ಏಕತಾನತೆ ಎನಿಸಿಬಿಡುವ ಸಂಭವ ಹೆಚ್ಚಿರುತ್ತದೆ. ಸಿನಿಮಾದಲ್ಲಿ ಬೇರೆ ಬೇರೆ ಜನರ ಜೊತೆ ಕೆಲಸ ಮಾಡುವ ಅವಕಾಶ ಇರುತ್ತದೆ' ಎಂದು ಎರಡರ ನಡುವೆ ತಮಗೆ ಕಂಡ ವ್ಯತ್ಯಾಸ ಬಿಡಿಸಿಡುತ್ತಾರೆ.

ಸದ್ಯ 'ಬ್ಯಾಡ್' ಸಿನಿಮಾದಲ್ಲಿ ನಟಿಸುತ್ತಿರುವ ಅಪೂರ್ವ, 'ನೋಡಿದವರು ಏನಂತಾರೆ', 'ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು' ಸಿನಿಮಾದಲ್ಲಿಯೂ ಅಭಿನಯಿಸುತ್ತಿದ್ದಾರೆ. ಈ ಮೂರು ಸಿನಿಮಾಗಳು ಬಿಡುಗಡೆಯ ಹಾದಿಯಲ್ಲಿವೆ. ■